# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1147 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.03.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 'ಕೂಸಿನ ಮನೆ' ಶೀರ್ಷಿಕೆಯಡಿ ಸ್ಥಾಪಿಸಿರುವ ಶಿಶುಪಾಲನಾ ಕೇಂದ್ರಗಳ ಸಂಖ್ಯೆ ಹಾಗೂ ಈ ಕೇಂದ್ರಗಳಿಗೆ ನೇಮಕ ಮಾಡಿಕೊಂಡಿರುವ ಆರೈಕೆದಾರರ (ಕೇರ್ ಟೇಕರ್ಸ್) ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 'ಕೂಸಿನ ಮನೆ' ಶೀರ್ಷಿಕೆಯಡಿ ಒಟ್ಟು 4019 ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಿಗೆ ಒಟ್ಟು 26603 ಆರೈಕೆದಾರರಿಗೆ ತರಬೇತಿ ನೀಡಲಾಗಿದ್ದು, ಕೂಸಿನ ಮನೆಗಳಲ್ಲಿ ಒಂದು ಬಾರಿಗೆ ಇಬ್ಬರು ಆರೈಕೆದಾರರು ವರ್ಷದಲ್ಲಿ 100 ದಿನಗಳ ಕಾಲ ಕಾರ್ಯನಿರ್ವಹಿಸುತ್ತಾರೆ.<br><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಶಿಶುಪಾಲನಾ ಕೇಂದ್ರದ ಆರೈಕೆದಾರರಿಗೆ ಪ್ರತಿ ದಿನ ಅಥವಾ ಮಾಸಿಕ ಆಧಾರದ ಮೇಲೆ ವೇತನ ಪಾವತಿಸಲಾಗುವುದೇ; ಮಾಸಿಕ ದೊರೆಯುವ ವೇತನ ಎಷ್ಟು; | ಶಿಶುಪಾಲನಾ ಕೇಂದ್ರ (ಕೂಸಿನ ಮನೆ) ದ ಕೇರ್ ಟೇಕರ್ಸ್ ಗಳಿಗೆ ಮಹಾತ್ಮಾಗಾಂಧಿ ನರೇಗಾ ಯೋಜನೆಯಡಿ ನಿಗದಿಪಡಿಸಿದ ರೂ. 370/-ಗಳ ದಿನಕೂಲಿ ದರವನ್ನು ಪಾವತಿಸಲಾಗುತ್ತಿದೆ. |
| (ಇ) | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಆರೈಕೆದಾರರಿಗೆ ಕೆಲವು ತಿಂಗಳುಗಳಿಂದ ವೇತನ ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪಾವತಿಸಬೇಕಿರುವ ಒಟ್ಟು ವೇತನ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಹೌದು.<br>ಪಾವತಿಸಲು ಬಾಕಿ ಇರುವ ಸಂಭಾವನೆಯ - ವಿವರವನ್ನು ಅನುಬಂಧದಲ್ಲಿ ನೀಡಿದೆ. |
| (ಈ) | ಬಾಕಿ ಉಳಿದಿರುವ ವೇತನವನ್ನು ಪಾವತಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: ಯಾವ ಕಾಲಮಿತಿಯೊಳಗೆ ವೇತನ ಪಾವತಿಸಲಾಗುವುದು ಮಾಹಿತಿ ನೀಡುವುದು? | ಕೂಸಿನ ಮನೆ ಕೇರ್ ಟೇಕರ್ ಗಳಿಗೆ ನರೇಗಾ ಯೋಜನೆಯಡಿ ನಿಗದಿತ ಕೂಲಿದರವನ್ನು ಪಾವತಿಸಲಾಗುತ್ತಿದೆ.<br><br>ನರೇಗಾ ಯೋಜನೆಯಡಿ ಸಮುದಾಯ ಕಾಮಗಾರಿ ನಡೆಯದಿರುವ ಸಂದರ್ಭದಲ್ಲಿ ಮಾತ್ರ ಸರ್ಕಾರದಿಂದ ಕೂಸಿನ ಮನೆಗಳ ನಿರ್ವಹಣೆಗಾಗಿ ಗ್ರಾಮ ಪಂಚಾಯಿತಿಗಳಿಗೆ ನೀಡಿರುವ ಅನುದಾನದಲ್ಲಿ ಕೇರ್ ಟೇಕರ್ಸ್ ಗಳಿಗೆ ನರೇಗಾ ಯೋಜನೆಯ ದಿನಗೂಲಿ ದರದಂತೆ ಕೂಲಿ ಪಾವತಿಸಲಾಗುತ್ತಿದೆ. |

| | | |
|---|---|---|
| | | ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಅ/ಅಭಿವೃದ್ಧಿ/343(ಭಾಗ-2)/2023 ದಿ:14.09.2023 ರಲ್ಲಿ, ಕೂಸಿನ ಮನೆಗಳ ನಿರ್ವಹಣೆಗೆ, ಗ್ರಾಮ ಪಂಚಾಯಿತಿಗಳಲ್ಲಿ ಲಭ್ಯವಿರುವ ಅನುದಾನವನ್ನು ಹಾಗೂ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ 15 ನೇ ಕೇಂದ್ರ ಹಣಕಾಸು ಯೋಜನೆಯ ಅನಿರ್ಬಂಧಿತ ಅನುದಾನ ಹಾಗೂ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳ ಅಭಿವೃದ್ಧಿ ಅನುದಾನವನ್ನು ಬಳಸಿಕೊಳ್ಳುವಂತೆ ತಿಳಿಸಲಾಗಿರುತ್ತದೆ. |

ಸಂಖ್ಯೆ: ಗ್ರಾಅಪ 249 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

# ಅನುಬಂಧ

| [redacted] | | | | |
|---|---|---|---|---|
| 1 | **Bagalkote** | 157 | 1370 | 2,06,060 |
| 2 | **Ballari** | 96 | 752 | 1,58,150 |
| 3 | **Belagavi** | 405 | 3096 | 0 |
| 4 | **Bengaluru Rural** | 79 | 632 | 15,12,718 |
| 5 | **Bidar** | 158 | 1248 | 0 |
| 6 | **Chamarajanagara** | 90 | 428 | 31,35,593 |
| 7 | **Chikkaballapura** | 144 | 478 | 73,500 |
| 8 | **Chikkamagaluru** | 119 | 278 | 8,30,780 |
| 9 | **Chitradurga** | 160 | 751 | 0 |
| 10 | **Dakshina Kannada** | 33 | 93 | 0 |
| 11 | **Davanagere** | 150 | 533 | 2,86,150 |
| 12 | **Dharwad** | 140 | 1298 | 71,64,540 |
| 13 | **Gadag** | 93 | 744 | 0 |
| 14 | **Hassan** | 213 | 599 | 6,62,279 |
| 15 | **Haveri** | 162 | 1400 | 0 |
| 16 | **Kalaburagi** | 209 | 2062 | 16,60,250 |
| 17 | **Kodagu** | 12 | 24 | 0 |
| 18 | **Kolar** | 129 | 1032 | 0 |
| 19 | **Koppal** | 153 | 1142 | 40,07,113 |
| 20 | **Mandya** | 109 | 559 | 9,19,829 |
| 21 | **Mysuru** | 109 | 666 | 8,34,179 |
| 22 | **Raichur** | 177 | 1304 | 14,34,114 |
| 23 | **Ramanagara** | 125 | 295 | 0 |
| 24 | **Shivamogga** | 140 | 1090 | 44,13,259 |
| 25 | **Tumkuru** | 175 | 1400 | 0 |
| 26 | **Udupi** | 14 | 99 | 2,07,200 |
| 27 | **Uttara Kannada** | 51 | 165 | 6,96,310 |
| 28 | **Vijayapura** | 163 | 1254 | 0 |
| 29 | **Vijayanagara** | 137 | 1088 | 21,05,117 |
| 30 | **Yadgir** | 117 | 723 | 0 |
| **Grand Total** | | **[illegible]** | **26603** | **3,03,07,141** |